**ಓ.ಎಸ್ ನಂಃ 214/2017**

**ಡಿ.ಡಬ್ಲ್ಯೂ:01/ಪರಶುರಾಮ**

**ದಿನಾಂಕಃ 13-02-2026 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರವಾಗಿ ಶ್ರೀ. ಎಂ.ಸಿ.ಹೆಚ್ ವಕೀಲರಿಂದಃ**

14. ನಾನು ಸಾಗರದ ಜನತಾ ಶಾಲೆಯಲ್ಲಿ 1987-1988 ನೇ ಸಾಲಿನಲ್ಲಿ 10 ನೇ ತರಗತಿ ವರೆಗೆ ಓದಿರುತ್ತೇನೆ. ನಂತರ ನಾನು ದಾಂಡೇಲಿಯ ಮಾರುತಿ ನಗರದ ನಿವಾಸಿಯಾಗಿರುತ್ತೇನೆ. ಅಲ್ಲಿ ನಾನು ನನ್ನ ತಂದೆ-ತಾಯಿಯವರ ಜೊತೆ ವಾಸವಾಗಿದ್ದೆ. ನನ್ನ ಪ್ರತಿವಾದ ಪತ್ರಕ್ಕೆ ನಾನೇ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ. ಅದೇ ರೀತಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೂ ನಾನೇ ಮಾಹಿತಿಯನ್ನು ನೀಡಿರುತ್ತೇನೆ.

15. ಯಾವ ದಿನಾಂಕದಂದು ವಾದಿಗೆ ದಾವಾಸ್ವತ್ತನು ಬಾಡಿಗೆಗೆ ನೀಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ನನ್ನ ತಂದೆಯವರು ಯಾವ ದಿನಾಂಕದಂದು ವಾದಿಯಿಂದ ರೂ.5,000/-ಗಳನ್ನು ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಾದಿಯು ಪಡೆದಿದ್ದಾರೆ ಎನ್ನಲಾದ ಬಾಂಡ್ ಎಷ್ಟು ಮುಖ ಬೆಲೆಯದ್ದು ಎಂದು ನನಗೆ ಗೊತ್ತಿಲ್ಲ. ಸದರಿ ಬಾಂಡ್ ಪೇಪರ್ ಈಗ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಬಾಂಡ್ ಪೇಪರ್ ನ ಯಾವುದೇ ವಿಚಾರ ನನಗೆ ಗೊತ್ತಿಲ್ಲ.

16. ನನ್ನ ತಂದೆಯವರು ವಾದಿಯಿಂದ ಪಡೆದ ರೂ.4,000/- ಗಳ ಕೈಗಡ ಸಾಲಕ್ಕೆ ಮಾಡಿಕೊಂಡ ಬಾಂಡ್ ಪೇಪರ್ ಯಾವ ಮುಖ ಬೆಲೆಯದ್ದು ಎಂದು ನನಗೆ ಗೊತ್ತಿಲ್ಲ. ಸದರಿ ಬಾಂಡ್ ಪೇಪರ್ ನ ಎಲ್ಲಾ ವಿಚಾರಗಳು ನನಗೆ ಗೊತ್ತಿಲ್ಲ, ಏಕೆಂದರೆ ನನಗೆ ನನ್ನ ತಾಯಿ ಮಾತ್ರ ಹೇಳುತ್ತಿದ್ದು ಮಾತ್ರ ಗೊತ್ತು ಎಂದು ಸಾಕ್ಷಿಯು ನುಡಿಯುತ್ತಾರೆ.

17. ನಮ್ಮ ತಂದೆಯವರು ವಾದಿಯ ಜೊತೆಗೆ ಕರಾರು ಪತ್ರ ಮಾಡಿಕೊಳ್ಳುವ ಸಮಯದಲ್ಲಿ ಯಾವಾಗ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಕೆ.ಹೆಚ್.ಬಿ ರವರಿಗೆ ಖರೀದಿ ಪತ್ರವನ್ನು

ಮಾಡಿಕೊಟ್ಟ ತದನಂತರ ತಾನು ವಾದಿಗೆ ಖರೀದಿ ಪತ್ರ ಮಾಡುವುದಾಗಿ ಒಪ್ಪಿಕೊಂಡಿದ್ದರು ಎಂದರೆ ಸರಿ. ನನ್ನ ತಂದೆಯವರ ಹೆಸರಿಗೆ ಕೆ.ಹೆಚ್.ಬಿ ರವರು ಖರೀದಿ ಪತ್ರ ಮಾಡಿಕೊಟ್ಟ ನಂತರವು ನನ್ನ ತಂದೆಯವರು ವಾದಿಗೆ ಖರೀದಿ ಪತ್ರ ಮಾಡಿಕೊಡದೆ ಬೇರೆಯವರಿಗೆ ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದರು ಎಂದರೆ ಸರಿಯಲ್ಲ.

18. ನಮ್ಮ ತಂದೆಯವರ ತಮ್ಮ ಜೀವಿತಾವಧಿಯಲ್ಲಿ ಕೆ.ಹೆಚ್.ಬಿ ಯಿಂದ ಖರೀದಿ ಪತ್ರವಾದ ನಂತರ ವಾದಿಗೆ ಖರೀದಿ ಪತ್ರ ಮಾಡಿಕೊಡಬೇಕಿತ್ತು ಎಂಬ ವಿಚಾರ ನನಗೂ ಗೊತ್ತಿತ್ತು ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡಬೇಕೆಂಬ ಉದ್ದೇಶದಿಂದ ಮತ್ತು ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿ, ಅದಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.-1 ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ.

19. ನನ್ನ ಪ್ರತಿವಾದ ಪತ್ರದಲ್ಲಿ ನಮೂದಿಸಿದಂತೆ ನನ್ನ ತಂದೆಗೆ ಸರಾಯಿ ಕುಡಿಸಿ, ಅವರು ಅಮಲಿನಲ್ಲಿದ್ದಾಗ ನಿ.ಪಿ-1 ನ್ನು ತಯಾರಿಸಲಾಗಿದೆ ಎಂದು ಸುಳ್ಳು ನಮೂದಿಸಲಾಗಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ. ಸರಿ ಇದೆ**
**ಸಹಿ ಇದೆ/-**
**(ತೇಜಸ್ವಿನಿ ಸೊಗಲದ)**
**ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ದಾಂಡೇಲಿ.**